ಪಿಡಬ್ಲ್ಯೂ-1 : : ಓ.ಎಸ್ ನಂ.482/2015

ಸಾಕ್ಷಿಗೆ ದಿನಾಂಕಃ09.03.2017 ರಂದು ಪ್ರಮಾಣವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ

ನನಗೆ ಈಗ 60 ವರ್ಷಗಳಾಗಿರುತ್ತದೆ. ನಿಪಿ-1ನ್ನು ನಾನು 2006ನೇ ಇಸವಿಯಲ್ಲಿ ಮಾಡಿಸಿಕೊಂಡಿರುತ್ತೇನೆ. ನಾನು ಮತ್ತು ಪ್ರತಿವಾದಿಯು ಅಕ್ಕಪಕ್ಕದ ಊರಿನವರು. ದಾವಾಸ್ವತ್ತಿನ ಸರ್ವೆ ನಂ.179/ಪಿ7ರಲ್ಲಿ 1ಎಕರೆ 20 ಗುಂಟೆ ಜಮೀನು ಇರುತ್ತದೆ. ದಾವಾಸ್ವತ್ತಿನ ಅಗ್ರಿಮೆಂಟ್ ಸಮಯದಲ್ಲಿ ಚಂದ್ರೇಗೌಡ ಬಿನ್ ನಂಜುಂಡೇಗೌಡ ಇಬ್ಬರು ಇದ್ದರು. ಅವರು ಹೊರಗಾಳುದೊಡ್ಡಿ ಗ್ರಾಮದರು. ಬೋರಲಿಂಗೇಗೌಡನ ಎಲ್ಲಾ ಮಕ್ಕಳು ಹಾಜರಿದ್ದರು. ದಾವಾಸ್ವತ್ತಿಗೆ ಸಂಬಂದಪಟ್ಟಂತೆ ಊರಿನಲ್ಲಿ ಮಾತುಕತೆ ಮಾಡಿರುತ್ತೇವೆ. ದಾವಾಸ್ವತ್ತಿಗೆ ಸಂಬಂದಪಟ್ಟಂತೆ 1ಲಕ್ಷ 80ಸಾವಿರಕ್ಕೆ ಮಾತುಕತೆಯಾಗಿರುತ್ತದೆ. ನಾನು ಪ್ರತಿವಾದಿಗೆ ಮುಂಗಡವಾಗಿ 15ಸಾವಿರ ಹಣವನ್ನು ತಾಲ್ಲೂಕು ಕಚೇರಿಯು ಮುಂಭಾಗ ಕೊಟ್ಟಿರುತ್ತೇನೆ. ಸದರಿ 15ಸಾವಿರ ರೂಪಾಯಿಗಳನ್ನು ಬೋರಲಿಂಗೇಗೌಡರ ಕೈಯಲ್ಲಿ ಕೊಟ್ಟಿರುತ್ತೇನೆ. ಸದರಿ ಸಮಯಕ್ಕೆ ನಾನು, ನಮ್ಮ ಹೆಂಗಸು, ಮತ್ತು ಬೋರಲಿಂಗೇಗೌಡ, ಆತನ ಮಕ್ಕಳು ಇದ್ದರು. ನಾನು ಅವಿದ್ಯಾವಂತ. ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ, ಪಹಣಿ ಬೋರಲಿಂಗೇಗೌಡನ ಹೆಸರಿನಲ್ಲಿರುತ್ತದೆ. ಪ್ರತಿವಾದಿಗೆ ದಾವಾಸ್ವತ್ತಿಯು ಸರ್ಕಾರದಿಂದ ಮಂಜೂರಾಗಿರುತ್ತದೆ. ಅಗ್ರಿಮೆಂಟ್‌ಗೆ ಚಂದ್ರೇಗೌಡ, ಪ್ರತಿವಾದಿ ಮತ್ತು ಪ್ರತಿವಾದಿಯ ಹೆಂಡತಿ ಮತ್ತು ನಾನು ಸಹಿ ಮಾಡಿರುತ್ತೇವೆ. ಸದರಿ ಅಗ್ರಿಮೆಂಟ್‌ಗೆ ಪ್ರತಿವಾದಿಯ ಮಕ್ಕಳು ಸಹಿ ಮಾಡಿರುವುದಿಲ್ಲ. ನಾನು ನನ್ನ ಹೆಸರಿಗೆ ಒಂದು ಅಗ್ರಿಮೆಂಟ್ ಮತ್ತು ನನ್ನ ಹೆಂಡತಿಯ ಹೆಸರಿಗೆ ಅಗ್ರಿಮೆಂಟ್ ಮಾಡಿಸಿಕೊಂಡಿರುತ್ತೇವೆ.

ಮೊದಲು ನನ್ನ ಹೆಸರಿಗೆ ಅಗ್ರಿಮೆಂಟ್ ಮಾಡಿಸಿಕೊಂಡಿರುತ್ತೇನೆ. ಪಿ ನಂಬರ್ ಇಲ್ಲದೇ ಅಗ್ರಿಮೆಂಟ್ ಆಗಿರುವುದಿಲ್ಲ. ಮೊದಲೇನೇ ಅಗ್ರಿಮೆಂಟ್‌ನ್ನು 2006ರಲ್ಲಿ ಮಾಡಿಸಿರುತ್ತೇನೆ. 2008ನೇ ಇಸವಿಯಲ್ಲಿ ನನ್ನ ಹೆಂಡತಿಯ ಹೆಸರಿಗೆ ಅಗ್ರಿಮೆಂಟ್ ಮಾಡಿಸಿರುತ್ತೇನೆ. 2ನೇ ಅಗ್ರಿಮೆಂಟ್ ಸಮಯದಲ್ಲಿ ಬಸವೇಗೌಡರ ಮಗ ಶಿವಣ್ಣ ಇದ್ದರು. 1ನೇ ಅಗ್ರಿಮೆಂಟ್‌ನ್ನು ಕೇನ್ಸಲ್ ಮಾಡಿರುವುದಿಲ್ಲ. 2ನೇ ಅಗ್ರಿಮೆಂಟ್‌ಗೆ ನನ್ನ ಹೆಂಡತಿ, ಬೋರಲಿಂಗಯ್ಯ, ಶಿವಣ್ಣ, ಸೌಮ್ಯ, ರುದ್ರ ರವರುಗಳು ಸಹಿ ಮಾಡಿರುತ್ತಾರೆ. 2ನೇ ಅಗ್ರಿಮೆಂಟ್ ಆಗುವ ಸಮಯಕ್ಕೆ ನಾನು ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿದ್ದೆ, ಚಂದ್ರೇಗೌಡರು ನನ್ನನ್ನು ಕರೆದಿರುತ್ತಾರೆ. 2ನೇ ಆಗ್ರಿಮೆಂಟ್‌ನ ವಿಚಾರವನ್ನು ನನ್ನ ಮಗ ಆಸ್ಪತ್ರೆಗೆ ಬಂದು ಹೇಳಿರುತ್ತಾರೆ. 2ನೇ ಆಗ್ರಿಮೆಂಟ್ ಆಗುವ ಸಮಯಕ್ಕೆ ನಾನು ಬಂದಿರುತ್ತೇನೆ. ನಾನು ಆಸ್ಪತ್ರೆಯಿಂದ ಬಂದಾಗ 1 ಮತ್ತು 2ನೇ ಅಗ್ರಿಮೆಂಟ್‌ಗಳು ರೆಡಿ ಇದ್ದವು, ನಾನು 2ನೇ ಅಗ್ರಿಮೆಂಟ್‌ಗೆ ನಾನು ಸಹಿ ಮಾಡಿರುವುದಿಲ್ಲ ಹಾಗೂ 1ನೇ ಅಗ್ರಿಮೆಂಟ್‌ಗೆ ನನ್ನ ಹೆಂಡತಿ ಸಹಿ ಮಾಡಿರುವುದಿಲ್ಲ, 2ನೇ ಆಗ್ರಿಮೆಂಟ್ ಆದ ನಂತರ ದಾವಾಸ್ವತ್ತನ್ನು ನಾವು ಸ್ವಾಧೀನ ಪಡೆದುಕೊಂಡಿರುತ್ತೇವೆ. ಪ್ರತಿವಾದಿಗಳು ದಾವಾಸ್ವತ್ತನ್ನು ನಮಗೆ ಸ್ವಾಧೀನ ಕೊಟ್ಟಿರುತ್ತಾರೆ.

ಚಂದ್ರೇಗೌಡ ಮತ್ತು ಶಿವಣ್ಣ ಎಂಬುವವರು ಈಗ ಜೀವಂತವಾಗಿರುತ್ತಾರೆ. 2ನೇ ಆಗ್ರಿಮೆಂಟ್‌ನಲ್ಲಿ ಮೊದಲನೇ ಅಗ್ರಿಮೆಂಟ್ ನನ್ನ ಹೆಸರಿಗೆ ಆಗಿದೆ ಎಂದು ತೋರಿಸಿರುತ್ತೇವೆ. ಮೊದಲೇನ ಅಗ್ರಿಮೆಂಟ್‌ನಲ್ಲಿ ಸ್ವಾಧೀನ ಪಡೆದುಕೊಂಡಿರುವುದಿಲ್ಲ, 2ನೇ ಅಗ್ರಿಮೆಂಟ್‌ನಲ್ಲಿ ಸ್ವಾಧೀನ ಪಡೆದುಕೊಂಡಿರುತ್ತೇವೆಂದು ಬರೆಸಿರುತ್ತೇವೆ. 2ನೇ ಅಗ್ರಿಮೆಂಟ್‌ನಲ್ಲಿ ದಾವಾಸ್ವತ್ತನ್ನು ಸ್ವಾಧೀನ ಪಡೆದುಕೊಂಡಿರುತ್ತೇವೆಂದು ಬರೆಸಿಲ್ಲ

ಎಂದರೆ ಸರಿಯಲ್ಲ. ಮೊದಲನೇ ಅಗ್ರಿಮೆಂಟ್ ಸ್ವಾಧೀನವಿಲ್ಲದ ಕರಾರು ಪತ್ರ ಮತ್ತು 2ನೇ ಅಗ್ರಿಮೆಂಟ್ ಕರಾರು ಪತ್ರ ಎಂದರೆ ಸರಿ. ಸರ್ಕಾರದಿಂದ ಬಂದ ದಾವಾಸ್ವತ್ತನ್ನು 15ವರ್ಷಗಳ ನಂತರ ಪರಬಾರೆ ಮಾಡಬಹುದು ಎಂಬುದನ್ನು ನಾನು ನೋಡಿರುತ್ತೇನೆ. ಹಕ್ಕುಪತ್ರದ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಪರಬಾರೆ ಮಾಡಲು ಸರ್ಕಾರದಿಂದ ಅನುಮತಿ ಪಡೆದುಕೊಂಡಿರುತ್ತೇನೆ. ದಾವಾಸ್ವತ್ತಿಗೆ ಸಂಬಂದಪಟ್ಟಂತೆ ಪ್ರತಿವಾದಿಯ ಮನೆಯ ಎಲ್ಲಾ ಸದಸ್ಯರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದುಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಕನಕಪುರ.

ಓ ಹೇ ಕೇ ಸ ಇ